# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾದಂ. ನ್ಯಾಯಾಲಯ, ಕುಣಿಗಲ್.

## ಸಿ.ಸಿ. 3810/2022

ಫಿರ್ಯಾದುದಾರರುಃ ಹುಲಿಯಾರುದುರ್ಗ ಪೊಲೀಸರು

ವಿರುದ್ಧ

ಆರೋಪಿಗಳು : ಶ್ರೀನಿವಾಸ ಮತ್ತು ಇತರರು

## ***ದೋಷಾರೋಪಣೆ***

**ಶ್ರೀಮತಿ ಗಂಗವ್ವ. ಆಯಟ್ಟಿ ,** ಬಿ.ಎ.ಎಲ್..ಎಲ್.ಬಿ., (Hon’s) ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್ ಆದು ನಾನು, 3 ನೇ ಆರೋಪಿಗಳಾದ,

| | |
|---|---|
| 1 | ಶ್ರೀನಿವಾಸ @ ಶ್ರೀನಿವಾಸಗೌಡ<br>ತಂದೆಃ ಲೇಟ್ ಪುಟ್ಟಸ್ವಾಮಯ್ಯ<br>ವಯಸ್ಸುಃ 42 ವರ್ಷ<br>ವಾಸಃ ನಂ 23 ಕೆಂಗುಂಟೆ, ಅಂಬೇಡ್ಕರ್ ಕಾಲೇಜು<br>ಎದುರುಗಡೆ ನಾಗರಬಾವಿ, ಬೆಂಗಳೂರು |
| 2 | ಚಂದ್ರಹಾಸ್ @ ಚಂದ್ರಹಾಸಗೌಡ<br>ತಂದೆಃ ಲೇಟ್ ಪುಟ್ಟಸ್ವಾಮಯ್ಯ<br>ವಯಸ್ಸುಃ 41 ವರ್ಷ, |
| 3 | ಶಂಕರಯ್ಯ @ ಶಂಕರಪ್ಪ .<br>ತಂದೆಃ ಲೇಟ್ ಚಿಕ್ಕತಿಮ್ಮೆಗೌಡ<br>ವಯಸ್ಸುಃ 54 ವರ್ಷ |

| | |
|---|---|
| 4 | ಜಗದೀಶ್ ಜಿ.ವಿ @ ಜಗ್ಗು<br>ತಂದೆಃ ವರದೇಗೌಡ್<br>ವಯಸ್ಸುಃ 25 ವರ್ಷ<br>ವಾಸಃ ಗುಡ್ಡೆತಿಪ್ಪಸಂದ್ರ ಗ್ರಾಮ, ಹುಲಿಯಾರುದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು |
| 5 | ಚಂದನ್ ವಿ.ಎಸ್. ತಂದೆಃ ಶಂಕರಪ್ಪ ವಯಸ್ಸುಃ 25 ವರ್ಷ |
| 6 | ಜಯಮ್ಮ ಕೋಂ. ಲೇಟ್ ಪುಟ್ಟಸ್ವಾಮಯ್ಯ<br>ವಯಸ್ಸುಃ 58 ವರ್ಷ<br>ಆರೋಪಿತರಾದ 2, 3, 5 ಮತ್ತು 6 ವಾಸಃ ವಡ್ರಳ್ಳು ಗ್ರಾಮ ಹುಲಿಯಾರುದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು |

ನಿಮ್ಮ ಮೇಲೆ ಇಡುವ ಆರೋಪಗಳು ಏನೆಂದರೆ,

ದಿನಾಂಕಃ 29.03.2022 ರಂದು ಮಧಾಹ್ನ 12.30 ಗಂಟೆಯ ಸಮಯದಲ್ಲಿ ಕುಣಿಗಲ್ ತಾಲ್ಲೂಕು, ಹುಲಿಯಾರುದುರ್ಗ ಪೋಲಿಸ್ ಠಾಣೆಯ ವ್ಯಾಪ್ತಿಯ ವಡ್ಡರಾಳು ಗ್ರಾಮದ ಬಳಿ ಇರುವ ಚಾ.ಸಾ.8 ಅವರ ಜಮೀನು ಸರ್ವೆ ನಂ 42/3 ರಲ್ಲಿ ಚಾ.ಸಾ.2 ಅವರ ತಾಯಿ ಹೊಸದಾಗಿ ಕಟ್ಟಿರುವ ಮನೆಯ ಹತ್ತಿರ ಆರೋಪಿತರುಗಳು ಆದ ನೀವು ಅಕ್ರಮ ಗುಂಪು ಕಟ್ಟಿಕೊಂಡು ಬಂದ ಪ್ರಯುಕ್ತ ಭಾ.ದಂ.ಸಂ. ಕಲಂ 143 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ ನೀವು ಸಮಾನ ಉದ್ದೇಶದಿಂದ ಚಾ.ಸಾ.3 ಅವರನ್ನು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಸ್ಥಳದಲ್ಲಿ ಶಾಂತಿ ಭಂಗ ಮಾಡಿದ ಪ್ರಯುಕ್ತ ಭಾ.ದಂ.ಸಂ. ಕಲಂ 504 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ 1-3 ನೀವು ಸಮಾನ ಉದ್ದೇಶದಿಂದ ಚಾ.ಸಾ. 1 ಅವರ ತಲೆಯ ಜುಟ್ಟನ್ನು ಹಿಡಿದು ಎಳೆದಾಡಿ ಅವರು ಉಟ್ಟುಕೊಂಡಿದ್ದ ಸೀರೆಯನ್ನು ಹಿಡಿದು ಎಳೆದಾಗಿ ಅವಮಾನ ಪಡಿಸಿದ ಪ್ರಯುಕ್ತ ಭಾ.ದಂ.ಸಂ. ಕಲಂ 354 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ ನೀವು ಸಮಾನ ಉದ್ದೇಶದಿಂದ ಆರೋಪಿ 3 ಆದ ನೀವು ಕಲ್ಲಿನಿಂದ ಚಾ.ಸಾ. 1 ಅವರಿಗೆ ಎಡಗಾಲಿನ ಪಾದದ ಗಿನ್ನಿಗೆ ಬಲಗಾಲದ ಮಂಡಿಗೆ ಬಲಗಡೆ ಭುಜದ ಬೆನ್ನಿಗೆ ಹೊಡೆದಿದ್ದು ಆರೋಪಿ 2 ಆದ ನೀವು ಕಲ್ಲಿನಿಂದ ಚಾ.ಸಾ.2 ಅವರ ಎರಡು ಕೈಗಳಿಗೆ ಹೊಡೆದು ಗಾಯ ಮಾಡಿದ ಪ್ರಯುಕ್ತ ಭಾ.ದಂ.ಸಂ. ಕಲಂ 324 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ ನೀವು ಸಮಾನ ಉದ್ದೇಶದಿಂದ ಆರೋಪಿ 2 ಆದ ನೀವು ಚಾ.ಸಾ. 3 ಅವರು ಜಗಳ ಬಿಡಿಸಲು ಬಂದಾಗ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕೆಳಗೆ ಕೆಡಗಿ ಕಾಲಿನಿಂದ ಬಲಗಡೆ ಹೊಟ್ಟೆಯ ಮೇಲೆ ತುಳಿದು ನೋವುಂಟು ಮಾಡಿದ ಪ್ರಯುಕ್ತ ಭಾ.ದಂ.ಸಂ. ಕಲಂ 323 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ ನೀವು ಚಾ.ಸಾ. 2 ಅವರ ಜಮೀನಲ್ಲಿ ಅತಿಕ್ರಮ ಪ್ರವೇಶ ಮಾಡಿದ ಪ್ರಯುಕ್ತ ಭಾ.ದಂ.ಸಂ. ಕಲಂ 447 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ ನೀವು ಸಮಾನ ಉದ್ದೇಶದಿಂದ ಆರೋಪಿ 4 ಅವರ ಮಾಲಿಕತ್ವದ ಜೆ.ಸಿ ಬಿ. ವಾಹನ ಸಂಖ್ಯೆ ಕೆ.ಎ 06-ಜಡ್ 6330 ಅನ್ನು ತೆಗೆದುಕೊಂಡು ವಾ.ಸಾ.2 ಅವರ ಜಮಿನಿಗೆ ಅತಿಕ್ರಮ ಪ್ರವೇಶ ಮಾಡಿ ಅವರು ಹೊಸದಾಗಿ ಕಟ್ಟಿರುವ ಮನೆಯನ್ನು ಹೊಡದು ಹಾಕಿ ರೂ. 235258/- ಮತ್ತು ಚಾ.ಸಾ. 7 ಅವರ ನೀರಿನ ತೊಟ್ಟಿಯನ್ನು ಹೊಡೆದು ಹಾಕಿ ರೂ. 137963/- ಒಟ್ಟು ರೂ.

373221/- ಗಳಷ್ಟು ನಷ್ಟ ಉಂಟು ಮಾಡಿದ ಪ್ರಯುಕ್ತ ಭಾ.ದಂ.ಸಂ. ಕಲಂ 427 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ ನೀವು ಸಮಾನ ಉದ್ದೇಶದಿಂದ ಚಾ.ಸಾ. 2 ಅವರು ಜಮೀನಿಗೆ ಬಂದು ಆರೋಪಿ 6 ಆದ ನೀವು ಉಳಿದ ಆರೋಪಿತರಿಗೆ ಅಪರಾಧ ಮಾಡಲು ಪ್ರಚೋಧನೆ ನೀಡಿದ ಪ್ರಯುಕ್ತ ಭಾ.ದಂ.ಸಂ. ಕಲಂ 114 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ 1, 2, 3 ಮತ್ತು 5 ಆದ ನೀವು ಚಾ.ಸಾ.1- 3 ಅವರಿಗೆ ಜೀವ ಬೆದರಿಗೆ ಹಾಕಿದ ಪ್ರಯುಕ್ತ ಭಾ.ದಂ.ಸಂ. ಕಲಂ 506 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 27 ನೇ ಡಿಸೆಂಬರ್ -2023

ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಣಿಗಲ್.

ಪ್ರಶ್ನೆ ಃ 1 ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ?

ಉತ್ತರ ಃ ಆರೋಪಿ 1 :

ಆರೋಪಿ 2 :

ಆರೋಪಿ 3 :

ಆರೋಪಿ 4 :

ಆರೋಪಿ 5 :

ಆರೋಪಿ 6 :

ಪ್ರಶ್ನೆ ಃ 2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರ ಃ ಆರೋಪಿ 1 :

ಆರೋಪಿ 2 :

ಆರೋಪಿ 3 :

ಆರೋಪಿ 4 :

ಆರೋಪಿ 5 :

ಆರೋಪಿ 6 :

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 27 ನೇ ಡಿಸೆಂಬರ್ –2023

ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಣಿಗಲ್.